ಮೂಲ ದಾವಾ ಸಂಖ್ಯೆ. 132/2016 ಪಿ ಡಬ್ಲ್ಯೂ 1 ಪರಶುರಾಮ್
(ದಿನಾಂಕ 07-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.)
ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಎಲ್ ಜಿ ವಕೀಲರಿಂದಃ-

ನಾನು ಈ ದಾವೆಯನ್ನು ಗುಣಸಾಗರಮ್ಮ ಇವರ ವಿರುದ್ಧ ದಾಖಲಿಸಿದ್ದೇನೆ. ಈ ದಾವೆಯನ್ನು ಪ್ರತಿವಾದಿಯರು ನಮ್ಮ ಜಾಗದಿಂದ 3 ಅಡಿ ಬಿಟ್ಟು ಕಟ್ಟಡ ಕಟ್ಟಿಕೊಳ್ಳಬೇಕು ಮತ್ತು 3 ಅಡಿ ಬಿಟ್ಟು ಕಿಟಕಿ ಇಟ್ಟುಕೊಳ್ಳಬೇಕು ಅಂತಾ ದಾವೆ ದಾಖಲಿಸಿದ್ದೇನೆ. ನನ್ನ ಆಸ್ತಿ ಪ್ಲಾಟ್ ನಂ. 80 ಅದರ ಚಕ್ಕುಬಂದಿ ಪೂಃ ರಸ್ತೆ, ಪಃ ಹಂಪಸಾಗರವರ ಪ್ಲಾಟ್, ದಃ ಪ್ಲಾಟ್ ನಂ.79 ಮತ್ತು ಉಃ ಪ್ಲಾಟ್ ನಂ.81 ಇರುತ್ತದೆ. ಸದರಿ ನನ್ನ ಆಸ್ತಿಯ ಅಳತೆ ಪೂ-ಪಃ 51 ಅಡಿ, ಉ-ದಃ 21 ಅಡಿ ಇರುತ್ತದೆ. ಸದರಿ ವಿಸ್ತೀರ್ಣದಲ್ಲಿ 16 ಕಾಲು ಅಡಿ ವಿಸ್ತೀರ್ಣ ಅಗಲ ಮತ್ತು 45 ಅಡಿ ಉದ್ದದ ಜಾಗದಲ್ಲಿ ಮನೆಯನ್ನು ಕಟ್ಟಿಕೊಂಡಿದ್ದೇನೆ. ಸದರಿ ಕಟ್ಟಡದ ವಿಸ್ತೀರ್ಣ ಪೂ-ಪಃ 45 ಅಡಿ ಮತ್ತು ಉ-ದಃ16 ಕಾಲು ಅಡಿ ಇರುತ್ತದೆ. ನಾನು ನನ್ನ ಆಸ್ತಿಗೆ ಕಾಂಪೌಂಡನ್ನು ಕಟ್ಟಿಕೊಂಡಿದ್ದೇನೆ. ನನ್ನ ಮನೆಯಿಂದ 4 ಮುಕ್ಕಾಲು ಅಡಿ ಜಾಗ ಉಳಿದಿದ್ದು, ಅದೇ ಜಾಗದಲ್ಲಿ ನಾನು ಕಾಂಪೌಂಡ್ ಕಟ್ಟಿಕೊಂಡಿದ್ದೇನೆ. ನನ್ನ ಮನೆಯ ದಕ್ಷಿಣ ದಿಕ್ಕಿಗೆ ಪ್ಲಾಟ್ ನಂ. 79 ಇರುತ್ತದೆ. ಸದರಿ ಪ್ಲಾಟು ಶಿವಕುಮಾರ್ ರವರದು ಇರುತ್ತದೆ. ಶಿವಕುಮಾರ್ ಮತ್ತು ನಾನು ಸೇರಿ ಹುದುವಿನ ಗೋಡೆ (ಕಾಮನ್ ವಾಲ್ ) ರ ಕುರಿತು ಒಂದು ಕರಾರುಪತ್ರವನ್ನು ಮಾಡಿಕೊಂಡಿದ್ದೇವೆಂದರೆ ಸರಿ. ಸದರಿ ಹುದುವಿನ ಗೋಡೆಯು ನಮ್ಮ ಜಾಗದಲ್ಲಿ 9 ಇಂಚು ಬರುತ್ತದೆ ಮತ್ತು ಅವರ ಜಾಗದಲ್ಲಿ 9 ಇಂಚು ಬರುತ್ತದೆ ಒಟ್ಟು 18 ಇಂಚಿನ ಕಲ್ಲಿನ ಗೋಡೆ ಇರುತ್ತದೆ. ಸದರಿ ನಿಪಿ-19 ನ್ನು ದಾಖಲೆಯನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ಇಬ್ಬರೂ ತಲಾ 1 ವರೆ ಅಡಿಯಂತೆ ಒಟ್ಟು 3 ಅಡಿ ಜಾಗದಲ್ಲಿ ಗೋಡೆ ಕಟ್ಟಲು ನಿರ್ಧರಿಸಿದ್ದೇವಂತಾ ಬರೆದಿದ್ದು ಅದೆ ಎಂದರೆ ಸಾಕ್ಷಿ ದಾಖಲೆಯನ್ನು ನೋಡಿ ಹೌದು ಎನ್ನುತ್ತಾರೆ. ಸಾಕ್ಷಿ ಮುಂದುವರೆದು 3 ಅಡಿ ಬುನಾದಿ ತೆಗೆದು ಅದರ ಮೇಲೆ ಬೇಸ್ ಮೆಂಟ್ ಕಟ್ಟಿದಾಗ 2 ಅಡಿ ಆಗುತ್ತದೆ ನಂತರ ಅದರ ಮೇಲೆ ಗೋಡೆ ಕಟ್ಟಿದಾಗ 1 ವರೆ ಅಡಿಯಾಗುತ್ತದೆ. ಸದರಿ ವಿಚಾರವನ್ನು ನಾನು ಕರಾರು ಪತ್ರದಲ್ಲಿ ಬರೆಸಿರುವುದಿಲ್ಲ ಹುದುವಿನ ಗೋಡೆಗೆ ಹತ್ತಿಕೊಂಡು ಅಲ್ಲಿ ಮನೆ ಇರುತ್ತದೆ ಅಲ್ಲಿ ಕಾಂಪೌಂಡ್ ಇರುವುದಿಲ್ಲ.

ನನ್ನ ಆಸ್ತಿಯಲ್ಲಿ ಮನೆ ಕಟ್ಟುವಾಗ ನಾನು ಲೈಸನ್ಸ ಪಡೆದು ಮನೆ ಕಟ್ಟಿದ್ದೇನೆ. ಸದರಿ ಲೈಸನ್ಸನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ಆ ರೀತಿ ಲೈಸನ್ಸನ್ನು ಹಾಜರುಪಡಿಸಿಲ್ಲ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ನನ್ನ ಮನೆ ಕಟ್ಟುವಾಗ ಸುತ್ತಲೂ 3 ಅಡಿ ಜಾಗವನ್ನು ಬಿಟ್ಟು ಮನೆ ಕಟ್ಟಿದ್ದೇನೆ. ಪ್ರತಿವಾದಿಯ ಪ್ಲಾಟ್ ನಂ. 81 ಇರುತ್ತದೆ. ಸದರಿ ಪ್ಲಾಟನ್ನು ಪ್ರತಿವಾದಿ ನೊಂದಾಯಿತ ಕ್ರಯಪತ್ರದ ಮೂಲಕ ಖರೀದಿಸಿದ್ದಾರೆಂದರೆ ಸರಿ.

ಮೂಲ ದಾವಾ ಸಂಖ್ಯೆ. 132/2016 ಪಿ ಡಬ್ಲ್ಯೂ 1 ಪರಶುರಾಮ್

ಸದರಿ ಆಸ್ತಿಯಲ್ಲಿ ಪ್ರತಿವಾದಿಯು ಮೊದಲು ಗುಡಿಸಲನ್ನು ಹಾಕಿಕೊಂಡಿದ್ದರು ನಂತರ ಅವರು ಸದರಿ ಆಸ್ತಿಯಲ್ಲಿ ಮನೆ ಕಟ್ಟಲು ಪ್ರಾರಂಭಿಸಿದರೆಂದರೆ ಸರಿ. ಪ್ರತಿವಾದಿಯು ಮನೆ ಕಟ್ಟಲು ಸಕ್ಷಮ ಪ್ರಾಧಿಕಾರದಿಂದ ಪರವಾನಿಗೆ ಸಹಾ ಪಡೆದಿದ್ದಾರೆಂದರೆ ಸರಿ. ಪ್ರತಿವಾದಿಯು ಮನೆ ಕಟ್ಟುವ ಸಮಯದಲ್ಲಿ ನಾನು ಪ್ರತಿವಾದಿಗೆ ತಕರಾರು ಮಾಡಿದ್ದೇನೆಂದರೆ ಸುಳ್ಳು. ಆ ಕಾರಣದಿಂದಾಗಿ ಪ್ರತಿವಾದಿಯು ಇದೇ ನ್ಯಾಯಾಲಯದಲ್ಲಿ ಒಂದು ದಾವೆಯನ್ನು ನನ್ನ ವಿರುದ್ಧ ದಾಖಲಿಸಿದ್ದಾಳೆಂದರೆ ಸುಳ್ಳು. ಪ್ರತಿವಾದಿಯ ಮನೆ ನನ್ನ ಮನೆಯ ಉತ್ತರ ದಿಕ್ಕಿಗೆ ಇದೆ ಎಂದರೆ ಸರಿ. ಪ್ರತಿವಾದಿಯ ಜಾಗದಲ್ಲಿ ನಾನು 1 ವರೆ ಅಡಿ ಜಾಗವನ್ನು ಅತಿಕ್ರಮಿಸಿ ಕಾಂಪೌಂಡ್ ಕಟ್ಟಿದ್ದೇನೆಂದರೆ ಸುಳ್ಳು. ಸದರಿ ಅಕ್ರಮವನ್ನು ತೆರವುಗೊಳಿಸಿ ಅಂತಾ ಕೇಳಿಕೊಂಡರೂ ನಾನು ತೆರವುಗೊಳಿಸಿಲ್ಲವೆಂದರೆ ಸರಿಯಲ್ಲ. ಪ್ರತಿವಾದಿಯು ತನ್ನ ಆಸ್ತಿಯ ಒಳಗೆ ಸ್ವಾಧೀನದಲ್ಲಿದ್ದು ನಾನು ಪ್ರತಿವಾದಿ ನನ್ನ ಆಸ್ತಿಯಲ್ಲಿ ಅತಿಕ್ರಮಣ ಮಾಡಿದ್ದಾರಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಪ್ರತಿವಾದಿಯ ಆಸ್ತಿಯಲ್ಲಿ ಅತಿಕ್ರಮಣ ಮಾಡಿ ಕಾಂಪೌಂಡ್ ಗೋಡೆ ಕಟ್ಟಿರುವುದರಿಂದ ಪ್ರತಿವಾದಿಯು ಅದನ್ನು ತೆರವುಗೊಳಿಸುವ ಕುರಿತು ನನ್ನ ವಿರುದ್ಧ ಇದೇ ನ್ಯಾಯಾಲಯದಲ್ಲಿ ದಾವೆಯನ್ನು ದಾಖಲಿಸಿದ್ದಾಳೆಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಸದರಿ ಗೋಡೆ ನನ್ನ ಆಸ್ತಿಯ ಒಳಗೆ ಇರುತ್ತದೆನ್ನುತ್ತಾರೆ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ